**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ ಚನ್ನಪಟ್ಟಣ.**

**ಸಿ.ಸಿ. ಸಂಖ್ಯೆ: 612/2023**

ಚಾಸಾ:1 ಪ್ರಾಸಾ:1

| | | |
|---|---|---|
| ಹೆಸರು | : | ಮಂಜುನಾಥ್ ಬಿ ಜೆ |
| ಗಂಡನ/ತಂದೆಯ ಹೆಸರು | : | ಜೋಗಯ್ಯ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಬಲ್ಲಾಪಟ್ಟಣ ಗ್ರಾಮ. |

**ದಿನಾಂಕ 08.05.2026 ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ: ಮಾನ್ಯ ಎಪಿಪಿ ಯವರಿಂದ:**

ಆರೋಪಿ ನನ್ನ ಸೋದರ ಮಾವ . ಚಾಸಾ-**2** ಮತ್ತು ಚಾಸಾ-**3** ಗೊತ್ತು. ಆರೋಪಿಗೂ ಮತ್ತು ನನಗೂ ಬಾಯಿಮಾತಿನ ಜಗಳ ಆಗಿರುತ್ತದೆ. ಆರೋಪಿ ನನಗೆ ಅವಾಚ್ಯ ಶಬ್ದದಿಂದ ನಿಂದಿಸಿಲ್ಲ, ನನ್ನ ಮೇಲೆ ಹಲ್ಲೆ ಮಾಡಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ, ಈ ಬಗ್ಗೆ ನಾನು ಪೋಲಿಸರಿಗೆ ದೂರು ನೀಡಿರುತ್ತೇನೆ. ಸದರಿ ದೂರನ್ನು ನಿಪಿ-**1** ಎಂದು ಗುರುತಿಸಲಾಯಿತು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-**1(ಎ)** ಎಂದು ಗುರುತಿಸಲಾಯಿತು.

ಪೋಲಿಸರು ನನ್ನ ಸಮಕ್ಷಮ ಮಹಜರ್ ಮಾಡಿಲ್ಲ. ಮಹಜರ್ ಅನ್ನು ನಿಪಿ-**2** ಎಂದು ಗುರುತಿಸಲಾಯಿತು. ಅದರಲ್ಲಿರುವ ನನ್ನ ಸಹಿಯನ್ನು ನಿಪಿ-**2(ಎ)** ಎಂದು ಗುರುತಿಸಲಾಯಿತು. ಪೋಲಿಸರು ನನ್ನ ಸಮಕ್ಷಮ ಮುದ್ದೆ ಮಾಲುಗಳನ್ನು ಜಪ್ತು ಮಾಡಿಕೊಂಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಸಂಪೂರ್ಣ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ವಾಟೀ ಸವಾಲು ಮಾಡಲು ಸ.ಸ.ಅ ರವರು ಅನುಮತಿ ಕೋರಿದ್ದಾರೆ, ಅನುಮತಿಸಲಾಯಿತು).**

**ವಾಟೀ ಸವಾಲು: ಎಪಿಪಿಯವರಿಂದ:**

ದಿನಾಂಕ 17.07.2023 ರಂದು ಮಧ್ಯಾಹ್ನ 2.30 ಗಂಟೆಯ ಸಮಯದಲ್ಲಿ ನಾನು ನಮ್ಮ ಗ್ರಾಮದ ಸರ್ವೆ ನಂಬರ್ 70 ರ ನಮ್ಮ ಜಮೀನಿನಲ್ಲಿ

ಜೆಸಿಬಿನಲ್ಲಿ ಕೆಲಸ ಮಾಡಿಸುತ್ತಿದ್ದಾಗ ಆರೋಪಿತರು ನಮ್ಮ ಜಮೀನಿಗೆ ಬಂದು ಇದು ನನಗೆ ಸೇರಬೇಕಾದ ಜಮೀನು ಎಂದು ಅವಾಚ್ಯ ಶಬ್ದದಿಂದ ಬೈದು, ಇನ್ನೊಂದು ಬಾರಿ ಈ ಜಮೀನಿಗೆ ಕಾಲಿಟ್ಟರೆ ನಿನಗೆ ಗುಂಡಿ ತೋಡುತ್ತೇನೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆಂದರೆ ಸರಿಯಲ್ಲ. ಅಲ್ಲೇ ಬಿದ್ದಿದ್ದ ಕಾಡು ಜಾತಿಯ ದೊಣ್ಣೆಯಿಂದ ನನ್ನ ಮೇಲೆ ಹಲ್ಲೆ ಮಾಡಿ ನೊವುಂಟು ಮಾಡಿರುತ್ತಾರೆಂದರೆ ಸರಿಯಲ್ಲ. ಘಟನೆಗೆ ಸಂಬಂದಪಟ್ಟಂತೆ ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದಿರುತ್ತೇನೆಂದರೆ ಸರಿಯಲ್ಲ. ದಿಃ18.07.2023 ರಂದು ಈ ಘಟನೆಗೆ ಸಂಬಂದಪಟ್ಟಂತೆ ನಾನು ನಿಪಿ-1 ರಂತೆ ದೂರು ನೀಡಿರುತ್ತೇನೆಂದರೆ ಸರಿಯಲ್ಲ.

ದಿಃ 18.07.2023 ರಂದು ಪೋಲಿಸರು ನಮ್ಮ ಗ್ರಾಮಕ್ಕೆ ಬಂದಿದ್ದು, ಅಲ್ಲಿ ನಾನು ಹಾಜರಿದ್ದು, ನಾನು ತೋರಿಸಿದ ಘಟನಾ ಸ್ಥಳದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಸಂಜೆ 4.00-4.45 ಗಂಟೆಯವರೆಗೆ ನಿಪಿ-2 ರಂತೆ ಮಹಜರ್ ಕ್ರಮ ಜರುಗಿಸಿರುತ್ತಾರೆಂದರೆ ಸರಿಯಲ್ಲ. ಆ ಸಮಯದಲ್ಲಿ ಸುಮಾರು 2 ವರೆ ಅಡಿ ಉದ್ದದ ಒಂದು ಹಿಡಿ ಗಾತ್ರದ ಕಾಡು ಜಾತಿಯ ದೊಣ್ಣೆಯನ್ನು ಅಮಾನತ್ತು ಪಡಿಸಿರುತ್ತಾರೆಂದರೆ ಸರಿಯಲ್ಲ.

ಆರೋಪಿಯು ನನ್ನ ಸೋದರ ಮಾವನಾದಾ ಕಾರಣ ಅವರ ಜೊತೆ ರಾಜಿ ಮಾಡಿಕೊಂಡಿರುವ ಕಾರಣ ಈ ದಿನ ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**